ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080–22028032/34/ಫ್ಯಾಕ್ಸ್ 22028041

ದಿನಾಂಕ : 18–02–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **International Conference on "Advancement to Polymetric Materials" – APM 2015.**<br><br>**Inauguration:**<br><br>**Shri Anantha Kumar, Minister for Chemical and Fertilizers. Govt. of India**<br><br>**Chief Guest:**<br><br>**Shri Hansraj Gangaram Ahir,**<br><br>**Minister of State for Chemical and Fertilizers, Govt. of India**<br><br>**Note: Vehicle will from Vartha Soudha at 6-15 P.M.** | **19–02–2015**<br>**Thursday at 7-00 PM** | **Movenpick Hotel, Near BEL Circle, Bengaluru – 560 054** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಸಚಿವ ಸಂಪುಟ ಸಭೆ

ಬೆಂಗಳೂರು, ಫೆಬ್ರವರಿ 18 (ಕರ್ನಾಟಕ ವಾರ್ತೆ)

ರಾಜ್ಯ ಸಚಿವ ಸಂಪುಟ ಸಭೆಯು ಫೆಬ್ರವರಿ 19 ರ ಗುರುವಾರ ಸಂಜೆ 5–00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.

ಬಾಬು:ಜಿಪಿಆರ್.

## ಮುಂದೂಡಿಕೆ

ಬೆಂಗಳೂರು, ಫೆಬ್ರವರಿ 18 (ಕರ್ನಾಟಕ ವಾರ್ತೆ)

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಲಬುರಗಿ ವಿಭಾಗದ ಕನ್ನಡ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾರ್ಚ್ 15 ಕ್ಕೆ ಮುಂದೂಡಲಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## "ಉದ್ಯೋಗ ಮೇಳ"

ಬೆಂಗಳೂರು, ಫೆಬ್ರವರಿ 18 (ಕರ್ನಾಟಕ ವಾರ್ತೆ)

ಉದ್ಯೋಗ ಮತ್ತು ತರಬೇತಿ ಇಲಾಖೆ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗಳ ಸಹಯೋಗದೊಂದಿಗೆ ನಿರುದ್ಯೋಗಿ ಯುವಕ/ಯುವತಿಯರಿಗೆ ನೇರ ಸಂದರ್ಶನಕ್ಕೆ ಅನುಕೂಲವಾಗುವಂತೆ ಫೆಬ್ರವರಿ 28 ರಂದು ಪೂರ್ವಾಹ್ನ 10.00 ಗಂಟೆಯಿಂದ ಅಪರಾಹ್ನ 4–00 ಗಂಟೆಯವರೆಗೆ ಶ್ರೀ ಕೃಷ್ಣ ಪದವಿ ಕಾಲೇಜು, ಐ.ಟಿ.ಐ. ಲೇಔಟ್ , ಬನಶಂಕರಿ, 36ನೇಹಂತ (ವಿದ್ಯಾಪೀಠ ಸರ್ಕಲ್) ಬೆಂಗಳೂರು – 560 085 ಇಲ್ಲಿ "ಉದ್ಯೋಗ ಮೇಳ" ವನ್ನು ಹಮ್ಮಿಕೊಂಡಿದೆ.

ಈ ಉದ್ಯೋಗ ಮೇಳದಲ್ಲಿ ಖಾಸಗಿ ವಲಯದ ಐಟಿ.ಸಿ. ವೋಲ್ವೊ, ಹೆಚ್.ಡಿ.ಎಫ್.ಸಿ., ಕೋಟಕ್ ಮಹೀಂದ್ರ, ಐ.ಎನ್.ಜಿ ವೈಶ್ಯ ಬ್ಯಾಂಕ್, ಟಫೆ, ನಾರಾಯಣ ಹೃದಯಾಲಯದ ಪ್ರೈ. ಲಿ. ಕಾಫೀಡೇ, ಎನ್‌ಟಿಟಿಎಫ್, ಎನ್‌ಐಐಟಿ, ಇಂಡೋ–ಯುಎಸ್–ಮಿಮ್ (ಪ್ರೈ) ಲಿ., ಅಡಿಕೋ ಇಂಡಿಯಾ ಲಿ, ಅಪೋಲೋ ಫಾರ್ಮಸಿ, ಸೆಂಟಮ್ ಎಲೆಕ್ಟ್ರಾನಿಕ್ಸ್, ಆಕ್ಸಿಸ್ ಬ್ಯಾಂಕ್, ಬಾಟಾ ಇಂಡಿಯಾ ಲಿ., ನ್ಯಾಶ್ ಇಂಡಿಯಾ ಲಿ;, ಬಿ.ಐ.ಎ.ಎಲ್. ಏರ್ ಇಂಡಿಯಾ ಸ್ಯಾಟ್ಸ್, ಸಿ.ಎಂ.ಎಸ್.ಲಿ;, ಸೋಡೆಕ್ಸ್ ಇಂಡಿಯಾ ಲಿ., ಇನ್ನು ಮುಂತಾದ ಹೆಸರಾಂತ ಸಂಸ್ಥೆಗಳು ಭಾಗವಹಿಸುತ್ತಿದ್ದು, ವಿವಿಧ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳಿಗೆ ಸ್ಥಳದಲ್ಲೇ ನೇರವಾಗಿ ಆಯ್ಕೆ/ಸಂದರ್ಶನ ಮಾಡಲಿದ್ದಾರೆ.

ಅವಿದ್ಯಾವಂತರು, ಅಕ್ಷರಸ್ಥರು ಅರ್ಧದಲ್ಲಿಯೇ ಶಾಲೆ ಬಿಟ್ಟವರು ಹಾಗೂ ಎಸ್.ಎಸ್.ಎಲ್.ಸಿ. ಅನುತ್ತೀರ್ಣ, ಎಸ್.ಎಸ್.ಎಲ್.ಸಿ. ಉತ್ತೀರ್ಣ, ಪಿ.ಯು.ಸಿ, ಐ.ಟಿಐ. ಮತ್ತು ಡಿಪ್ಲೊಮಾ (ಎಲ್ಲಾ ಟ್ರೇಡ್‌ಗಳು) ಮತ್ತು ಸಿ.ಎನ್.ಸಿ. ಆಪರೇಟರ್ಸ್ , ಎಲ್ಲಾ ಪದವೀಧರರು ಹಾಗೂ ಎಂ.ಬಿ.ಎ. ಪದವಿ ಹೊಂದಿದವರಿಗೆ ಉದ್ಯೋಗ

ಅವಕಾಶಗಳು ಲಭ್ಯವಿದೆ. ಉದಯೋಗಾಕಾಂಕ್ಷಿಗಳು ತಮ್ಮ ವೈಯಕ್ತಿಕ ವಿವರದೊಂದಿಗೆ "ಉದ್ಯೋಗ ಮೇಳ" ದಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 22259351/22374582 ಎಂದು ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್